ವರಾಹಿ ನೀರಾವರಿ ಯೋಜನೆ ಬಗ್ಗೆ.

೧೧೧೬ (ಎ). ಶ್ರೀ ಜೆ. ಎಸ್. ಅಚಾರ್ (ಬೈಂದೂರು).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ಸಹಸ್ರಾರು ಎಕರೆ ಜಮೀನಿಗೆ ನೀರು ಪೂರೈಸುವ ವರಾಹಿ ನೀರಾವರಿ ಯೋಜನೆಯು ಕುರಿತು ಸಾರ್ವಜನಿಕರ ಹಾಗೂ ಶಾಸಕರ ಒತ್ತಾಯ ವಿರುವುದು ನಿಜವಲ್ಲವೇ ?

ಆ) ಈ ಯೋಜನೆಯನ್ನು ಮುಂದಿನ ವರ್ಷ ಖಂಡಿತ ಕೈಗೆತ್ತಿಕೊಳ್ಳಲಾಗುವುದೆಂದು ಮಾನ್ಯ ಸಚಿವರು ಕಳೆದ ವರ್ಷ ಸದನದಲ್ಲಿ ವಾಗ್ದಾನವಿತ್ತಿದ್ದು ನಿಜವಲ್ಲವೇ ?

ಇ) ಹಾಗಿದ್ದಲ್ಲಿ, ಯೋಜನೆಯು ಪ್ರಗತಿಯಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ನಿಜ.

ಆ) ನಿಜ.

ಇ) ಆಣೆಕಟ್ಟು ಮತ್ತು ನಾಲೆಯ ನಿರ್ಮಾಣ ಹಾಗೂ ಮುಳುಗಡೆಯಾಗುವ ಪ್ರದೇಶದಲ್ಲಿ ಅರಣ್ಯ ಭೂಮಿಯನ್ನು ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವುದೇ ಯೋಜನಾ ಪ್ರಗತಿಯಲ್ಲಿ ವಿಳಂಬವಾಗುತ್ತಿರುವುದಕ್ಕೆ ಮೂಲ ಕಾರಣ.

ಚಿತ್ರದುರ್ಗ ಜಿಲ್ಲೆಯ ಸರಕಾರಿ ಪ್ರೌಢ ಶಾಲೆಗಳ ಬಗ್ಗೆ.

೧೧೩೫. ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಜಗಳೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು (ತಾಲ್ಲೂಕು ವಾರು ವಿವರಗಳನ್ನು ಒದಗಿಸುವುದು)

ಆ) ಈ ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆಯೇ ?

ಇ) ಇಲ್ಲದಿದ್ದಲ್ಲಿ ಎಷ್ಟು ಶಾಲೆಗಳಿಗೆ ಸ್ವಂತ ಕಟ್ಟಡಗಳಿರುವುದಿಲ್ಲ (ತಾಲ್ಲೂಕು ವಾರು ವಿವರ ಗಳನ್ನು ಒದಗಿಸುವುದು).

ಈ) ಎಲ್ಲಾ ಶಾಲೆಗಳಿಗೂ ಯಾವಾಗ ಕಟ್ಟಡಗಳನ್ನು ಒದಗಿಸಲಾಗುವುದು.

ಶ್ರೀ ಡಿ ಮಂಜುನಾಥ್ (ಶಿಕ್ಷಣ ಸಚಿವರು).—

ಅ) ೮೨ (ಪ್ರೌಢ : ಕಿರಿಯ ಕಾಲೇಜುಗಳುಸೇರಿ) ಪಟ್ಟಿ ಲಗತ್ತಿಸಿದೆ.

ಆ) ೪೮ ಪ್ರೌಢ ಶಾಲೆ (ಕಿರಿಯ ಕಾಲೇಜುಗಳು ಸೇರಿ)

ಇ) ೩೪ (ಪಟ್ಟಿ ಲಗತ್ತಿಸಿದೆ)

ಈ) ಪ್ರತಿ ವರ್ಷ ಆಯವ್ಯಯದಲ್ಲಿ ಜಿಲ್ಲಾ ಪರಿಷತ್‌ಗೆ ಹಣ ಒದಗಿಸಲಾಗುತ್ತದೆ. ಅದ್ಯತೆಯ ಮೇಲೆ ಹಂತ ಹಂತವಾಗಿ ಕಟ್ಟಡಗಳನ್ನು ಜಿಲ್ಲಾ ಪರಿಷತ್ ನಿರ್ಮಿಸುತ್ತದೆ.